<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿ.ಸಿ ನಂಬ್ರಃ **543/2017**

ಚಾಸಾ-**3** ಫ್ರಾಸಾ-**4**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಸುನೀಲ್ ಪೂಜಾರಿ |
| ತಂದೆಯ ಹೆಸರು | : | ಕುಮಾರ್ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಫೋಟೋಗ್ರಾಫರ್ |
| ವಾಸ | : | ಉಪ್ಪುಂದ |

ದಿನಾಂಕಃ **30-08-2024** ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ದಿನಾಂಕ 14-01-2016 ರಂದು ಜಾತ್ರೆ ಮುಗಿಸಿ ಮನೆಗೆ ಹೋಗುವಾಗ ಪೊಲೀಸರು ಅವರ ಕರ್ತವ್ಯ ನಡೆಸುತ್ತಿದ್ದಾಗ ರಾತ್ರಿ 10.30 ರ ಸಮಯದಲ್ಲಿ ಸಂತೋಷ್ ಶೆಟ್ಟಿ ಮತ್ತು ಪ್ರಕಾಶ್ ಶೆಟ್ಟಿರವರು ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ. ಪೊಲೀಸರು ಮತ್ತು ಆರೋಪಿತರ ನಡುವೆ ಮಾತಿನ ಚಕಾಮಕಿ ಆಗಿ ಆರೋಪಿತರು ಅವರೊಡನೆ ವಾಗ್ವಾದಕ್ಕೆ ಇಳಿದಿರುತ್ತಾರೆ. ಪೊಲೀಸರು ಆರೋಪಿತರನ್ನು ಠಾಣೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿದಾಗ ಆರೋಪಿತರು ಅವರ ಮೈ ಮೇಲೆ ಕೈ ಹಾಕಿ, ಕೈಗಳಿಂದ ದೂಡಿ ಓಡಿ ಹೋಗಿರುತ್ತಾರೆ. ನಾನು ಆರೋಪಿತರನ್ನು ನೋಡಿರುತ್ತೇನೆ. ಈ ಪ್ರಕರಣದ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ಈ ದಿನ ಆರೋಪಿತರು ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿದ ಮೇರೆಗೆ ಗುರುತಿಸುವ ಪ್ರಕ್ರಿಯೆಯನ್ನು ಕೈ ಬಿಡಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಆ ದಿನ ಆರೋಪಿತರು ಪೊಲೀಸರನ್ನು ಅವ್ಯಾಚ್ಚ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿತರು ಬುಲೋರೊ ವಾಹನ ಸಂಖ್ಯೆ ಕೆಎ-20-ಜಡ್-4173 ಆಗಿರುತ್ತದೆ. ಹಲ್ಲೆಗೆ ಒಳಗಾದ ಪೊಲೀಸರ ಹೆಸರು ಈಶ್ವರ ಮತ್ತು ಪ್ರಶಾಂತ. ಆರೋಪಿತರು ಪೊಲೀಸರ ಸಮವಸ್ತ್ರದ ಕಾಲರ್ ಕೈ ಹಾಕಿ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ದೂರಿನಿಂದ ನೋಡಿರುತ್ತೇನೆ ಟ್ರಾಫಿಕ್ ಜಾಮ್ ಇದ್ದ ಕಾರಣ ಹೊಡೆದಿರುವುದನ್ನುನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ 16-01-2016 ರಂದು ಪೊಲೀಸರು ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಘಟನಾ ಸ್ಥಳದಲ್ಲಿ ಪೊಲೀಸರು ಮಹಜರು ಮಾಡುವಾಗ ನಾನು ಹಾಜರಿದ್ದೆ ಎಂದರೆ ಸರಿ. ಮಹಜರು ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮಹಜರು ಮತ್ತು ನಕಾಶೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ಈಗಾಗಲೇ ನಿ.ಪಿ.2 ಮತ್ತು ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ.2(ಬಿ) ಮತ್ತು ನಿ.ಪಿ.3(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಹೆಚ್. ಎ.ಎಸ್. ರವರಿಂದಃ

ನಾನು ಪೋಟೋಗ್ರಾಫರ್ ಕೆಲಸ ಮಾಡುತ್ತಿದ್ದೇನೆ. ಆ ದಿನ ನಾನು ಜಾತ್ರೆ ಪ್ರಯುಕ್ತ ಬಂದಿರುತ್ತೇನೆ. ಚಾಸಾ 1 ರವರು ನಮ್ಮ ಊರಿನವರಾಗಿದ್ದು, ಪರಿಚಯಸ್ಥರು ಎಂದರೆ ಸರಿ. ಆ ದಿನ ಜಾತ್ರೆ ಪ್ರಯುಕ್ತ ತುಂಬಾ ಜನ ಸೇರಿದ್ದರು ಎಂದರೆ ಸರಿ. ರಾತ್ರಿ 10 ಗಂಟೆ ಆಗಿದ್ದರಿಂದ ಕತ್ತಲೆ ಆಗಿತ್ತು ಎಂದರೆ ಸರಿ. ಆ ದಿನ ಜನ ಸಂದಣೆಯಿಂದ ಟ್ರಾಫಿಕ್ ಜಾಮ್ ಆಗಿತ್ತು ಎಂದರೆ ಸರಿ. ಆ ದಿನ ಸುಮಾರು 6 ರಿಂದ 7 ಜನ ಪೊಲೀಸರು ಕರ್ತವ್ಯದಲ್ಲಿದ್ದರು. ಆ ದಿನ ಪೊಲೀಸರಿಗೆ ಕರ್ತವ್ಯ ನಿರ್ವಹಿಸಲು ಆಗದೇ ಜನರು ಬೊಬ್ಬೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಬುಲೋರೋ ವಾಹನದಲ್ಲಿ ಇಬ್ಬರು ಕೆಳಗೆ ಬಂದರು, ಒಳಗಡೆ ಎಷ್ಟು ಜನ ಇದ್ದರು ಎಂದು ಗೊತ್ತಿಲ್ಲ.

ಆರೋಪಿತರು ದೂಡಿರುವುದನ್ನು ಹೊರತು ಪಡಿಸಿ, ಹೊಡೆದಿರುವುದನ್ನು ಗಮನಿಸಿರುವುದಿಲ್ಲ. ಒಬ್ಬರೇ ಆರೋಪಿತರು ದೂಡಿರುತ್ತಾರೆ. ಅವರಲ್ಲಿ ಯಾರು ಚಾಸಾ 1 ರವರನ್ನು ದೂಡಿದ್ದಾರೆ ಎಂದು ಗೊತ್ತಿಲ್ಲ. ಚಾಸಾ 1

ರವರನ್ನು ದೂಡುವಾಗ ಚಾಸಾ 2 ರವರು ಹತ್ತಿರದಲ್ಲಿ ಇದ್ದರು. ನಂತರ ಆರೋಪಿತರು ಅಲ್ಲಿಂದ ಓಡಿ ಹೋಗಿರುತ್ತಾರೆ. ನನ್ನನ್ನು ಹೊರತು ಪಡಿಸಿ ಬೇರೆ ಯಾರು ಸಾಕ್ಷಿಯಾಗಿ ಹೇಳಿಕೆ ನೀಡಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಮಹಜರನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತಾರೆ, ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರು ಮಾಡಿದ ಸ್ಥಳದ ಚೆಕ್‌ಬಂದಿ ಹೇಳಲು ಸಾಧ್ಯವಿಲ್ಲ.

ಭಾವಚಿತ್ರವನ್ನು ಯಾವಾ ಕಾರಣಕ್ಕೆ ತೆಗೆದಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಮಹಜರಿಗೆ ಮೂರು ಜನ ಸಹಿ ಮಾಡಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲ, ಚಾಸಾ 1 ರವರು ನಮ್ಮ ಊರಿನವರು ಆದ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.